ಇ) ಕೋಟೆಯ ಕಾಮಗಾರಿಗಳ ಬಗ್ಗೆ ಸ್ಥಳೀಯ ಶಾಸಕರ ಗಮನಕ್ಕೆ ತರದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಕಾರಣವೇನು?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು) :

ಅ) ಗಮನಕ್ಕೆ ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಇಲ್ಲ. ಈ ಕೋಟೆಯ ಸಂರಕ್ಷಣಾ ಕಾಮಗಾರಿಯ ಬಗ್ಗೆ ಮಾನ್ಯ ಸ್ಥಳೀಯ ಶಾಸಕರ ಗಮನಕ್ಕೆ ಮಾಹಿತಿಯನ್ನು ತರಲು ಸೂಚಿಸಲಾಗುವುದು.

985 ಶ್ರೀ ಗೋಪಾಲಕೃಷ್ಣ ಬೇಳೂರು (ಸಾಗರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಕ್ಸಲ್ ಹಾವಳಿಯ ಪ್ರದೇಶಗಳ ಶಾಸಕರುಗಳಿಗೆ ಉತ್ತಮ ಮಟ್ಟದ ಭದ್ರತೆಯನ್ನು ನೀಡುವುದಕ್ಕೆ ಸಂಬಂಧಿಸಿದಂತೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಆ) ಅದು ಯಾವ ರೀತಿಯದ್ದಾಗಿರುತ್ತದೆ; ಈಗ ಅದು ಯಾವ ಹಂತದಲ್ಲಿದೆ?

ಡಾ: ವಿ.ಎಸ್.ಆಚಾರ್ಯ (ಗೃಹ ಸಚಿವರು) :

ಅ) ನಕ್ಸಲ್ ಪೀಡಿತ ಪ್ರದೇಶದಲ್ಲಿರುವ ಶಾಸಕರು/ಚುನಾಯಿತ ಪ್ರತಿನಿಧಿಗಳಿಗೆ ಅವರಿಗಿರುವ ಬೆದರಿಕೆಯ ಗ್ರಹಿಕೆ ಹಾಗೂ ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ಸೂಕ್ತ ಭದ್ರತೆಯನ್ನು ನೀಡಲಾಗುತ್ತಿದೆ.

ಶಾಸಕರು/ಚುನಾಯಿತ ಪ್ರತಿನಿಧಿಗಳ ಭದ್ರತೆಗೆ ಸಂಬಂಧಿಸಿದಂತೆ ನಕ್ಸಲ್ ಪೀಡಿತ ಪ್ರದೇಶಗಳ ಜಿಲ್ಲಾ ಪೊಲೀಸ್ ಅಧೀಕ್ಷಕರುಗಳಿಗೆ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲು ಸೂಚಿಸಲಾಗಿದೆ.

ಆಗಿಂದಾಗ್ಗೆ ಈ ಬಗ್ಗೆ ಪುನರ್ ವಿಮರ್ಶಿಸಿ ಸೂಕ್ತ ಭದ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

The MLAs/Elected Representatives have been provided with security depending upon threat perception and local situation.

The Superintendents of Police of naxal affected districts have been instructed to take all necessary precautionary measures regarding security to the MLAs/Elected Representatives.

In this regard review is conducted regularly and necessary security measures are being taken.

ಆ) ಸಂಬಂಧಪಟ್ಟ ಶಾಸಕರ/ ಚುನಾಯಿತ ಪ್ರತಿನಿಧಿಗಳ ಭದ್ರತೆಯ ಹಿತದೃಷ್ಟಿಯಿಂದ ವಿವರಗಳನ್ನು ಸಂಬಂಧಪಟ್ಟ ಶಾಸಕರಿಗೆ ತಿಳಿಸಲು ಪೊಲೀಸ್ ಅಧಿಕಾರಿಗಳಿಗೆ ಸೂಚಿಸಲಾಗಿದೆ.

In the interest of their security, the local police officials have been instructed to appraise the concerned legislators.

459 ಶ್ರೀ ಬಚ್ಚೇಗೌಡ ಕೆ.ಪಿ.(ಚಿಕ್ಕಬಳ್ಳಾಪುರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮೆಟ್ರೋ ರೈಲು ಯೋಜನೆಯ ಉದ್ದೇಶಿತ ಉದ್ದ (ಕಿ.ಮೀ.ಗಳಲ್ಲಿ) ಹಾಗೂ ಅಂದಾಜು ವೆಚ್ಚವೆಷ್ಟು (ಯೋಜನೆಯ ಫಂಡಿಂಗ್ ಸ್ಟ್ರಕ್ಚರ್ ಬಗ್ಗೆ ಮಾಹಿತಿ ನೀಡುವುದು);

ಆ) ಇಲ್ಲಿಯವರೆಗಿನ ಈ ಯೋಜನೆಯ ಗುರಿ ಮತ್ತು ಸಾಧನೆಗಳೇನು (ಭೌತಿಕ ಮತ್ತು ಆರ್ಥಿಕ ಅಂಕಿ ಅಂಶಗಳ ಬಗ್ಗೆ ಮಾಹಿತಿ ನೀಡುವುದು)?

ಇ) ಈ ಯೋಜನೆಯನ್ನು ಪೂರೈಸುವ ಬಗೆಗಿನ ಮೂಲತಃ ಕಾಲಮಿತಿ ಹಾಗೂ ವಾಸ್ತವ ಕಾಲಮಿತಿಗಳೇನು (ಮಾಹಿತಿ ನೀಡುವುದು);

ಈ) ಮೆಟ್ರೋ ರೈಲಿಗಿಂತ ಮಾನೋರೈಲು ಯೋಜನೆ ಆರ್ಥಿಕ ದೃಷ್ಟಿಯಿಂದ ಅನುಕೂಲಕರ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು) :

ಅ) ಯೋಜನೆಯ ಉದ್ದೇಶಿತ ಉದ್ದ 42.6 ಕಿ.ಮೀ. ಅಂದಾಜು ವೆಚ್ಚ ರೂ. 8158 ಕೋಟಿಗಳು.

ಕ್ರ ಸಂ.		ಭಾರತ ಸರ್ಕಾರ	ಕರ್ನಾಟಕ ಸರ್ಕಾರ	ಒಟ್ಟು
1	ಸಾಮ್ಯ ಷೇರು	15%	15%	30%
2	ಅಧೀನ ಸಾಲ	10%	15%	25%
3	ಹಣಕಾಸು ಸಂಸ್ಥೆಗಳಿಂದ ಸಾಲ	–	–	45%
	ಒಟ್ಟು	–	–	**100%**